# Constitution Day, Date : 26-11-2022









# ‘ಸರ್ವರಿಗೂ ಸಮಬಾಳು, ಪಾಲು’

ಪ್ರಜಾವಾಣಿ ವಾರ್ತೆ

ಚನ್ನರಾಯಪಟ್ಟಣ: ‘ಸಂವಿಧಾನ ಎಲ್ಲರ ಹಿತವನ್ನು ಕಾಪಾಡುತ್ತದೆ’ ಎಂದು ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಎನ್. ಶಂಕರೇಶ್ ಹೇಳಿದರು.

ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ರಾಜ್ಯಶಾಸ್ತ್ರ ವಿಭಾಗದಿಂದ ಶನಿವಾರ ಏರ್ಪಡಿಸಿದ್ದ ಸಂವಿಧಾನ ದಿನಾಚರಣೆಯಲ್ಲಿ ಮಾತನಾಡಿದರು.

‘ಸರ್ವರಿಗೂ ಸಮಬಾಳು, ಸರ್ವರಿಗೂ ಪಾಲು ಕಲ್ಪಿಸುವ ಧ್ಯೇಯೋದ್ದೇಶವನ್ನು ಸಂವಿಧಾನ ಹೊಂದಿದೆ. ದೇಶಕ್ಕೆ ಸೂಕ್ತ ಸಂವಿಧಾನವನ್ನು ಡಾ.ಬಿ.ಆರ್. ಅಂಬೇಡ್ಕರ್ ರಚಿಸಿದ್ದಾರೆ. 1949ರ ನ. 26ರಂದು ಸಂವಿಧಾನವನ್ನು ಅಂಗೀಕರಿಸಲಾಯಿತು. ಅದು 1950ರ ಜ.26ರಂದು ಜಾರಿಗೆ ಬಂತು’ ಎಂದು ಹೇಳಿದರು.

ಸಹಾಯಕ ಪ್ರಾಧ್ಯಾಪಕ ಸಿದ್ದರಾಜು ಮಾತನಾಡಿ, ‘ಸಂವಿಧಾನ ದೇಶದ ಉಸಿರು ಇದ್ದಂತೆ’ ಎಂದರು.

ವಿದ್ಯಾರ್ಥಿ ಎ.ಎಸ್. ವಿದ್ಯಾಶ್ರೀ ಮಾತನಾಡಿ, ‘ಭಾರತದ ಸಂವಿಧಾನ ಪ್ರಪಂಚದಲ್ಲಿಯೇ ಬೃಹತ್ ಸಂವಿಧಾನ ಎನ್ನಿಸಿಕೊಂಡಿದೆ. ದೇಶಕ್ಕೆ ಅಂಬೇಡ್ಕರ್ ಕೊಡುಗೆ ಅನನ್ಯವಾದುದು’ ಎಂದು ಹೇಳಿದರು.

ಅಂಬೇಡ್ಕರ್ ಕುರಿತು ಗೀತ ಗಾಯನವನ್ನು ಕಲಾವಿದ ಮಂಜು ಹಿರಿಬಿಳ್ತಿ ನಡೆಸಿಕೊಟ್ಟರು. ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಎನ್.ಟಿ. ನಾಗರಾಜ ಇದ್ದರು.



ಚನ್ನರಾಯಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ಸಂವಿಧಾನ ದಿನಾಚರಣೆಯಲ್ಲಿ ಪ್ರತಿಜ್ಞಾ ವಿಧಿ ಸ್ವೀಕರಿಸಿದರು

Scanned with OKEN Scanner